ಕರ್ನಾಟಕ ಸರ್ಕಾರ
Government of karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BENGALURU - 560 085
Email: ntse.dsert-ka@nic.in Website: http://dsert.kar.nic.in
Phone - 080 26980100
Fax - 080 26422377
ಡಿಎಸ್ಇಆರ್‌ಟಿ DSERT

ಸಂಖ್ಯೆ:DSERT/NTSE/02/NSP/2.0/2021-22 ದಿನಾಂಕ: 17/12/2021

## ಜ್ಞಾಪನಾ

ವಿಷಯ : NTSE/NMMS ಪರೀಕ್ಷಾ ಸಿದ್ದತೆಗೆ ಸಂಬಂಧಿಸಿದಂತೆ GMAT ವಿಡಿಯೋಗಳನ್ನು DSERT ಜ್ಞಾನದೀಪ Youtube ನಲ್ಲಿ upload ಮಾಡಿರುವ ಬಗ್ಗೆ.

ಉಲ್ಲೇಖ : 1.ಈ ಕಛೇರಿ ಪತ್ರ ಸಮ ಸಂಖ್ಯೆ ದಿನಾಂಕ :12-10-2021.
2. ಈ ಕಛೇರಿ ಪತ್ರ ಸಮ ಸಂಖ್ಯೆ ದಿನಾಂಕ :04-11-2021.

***************

ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, 8ನೇ ಹಾಗೂ 10ನೇ ತರಗತಿಯಲ್ಲಿ ವ್ಯಾಸಂಗ ನಿರತ ವಿದ್ಯಾರ್ಥಿಗಳಿಗೆ ಪ್ರತಿ ಸಾಲಿನಲ್ಲಿ ಪ್ರತಿಭಾನ್ವೇಷಣೆ ಪರೀಕ್ಷೆಗಳಾದ NMMS/NTSE ನ್ನು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ರವರು ನಡೆಸುತ್ತಿರುತ್ತಾರೆ. ಸದರಿ ಪರೀಕ್ಷೆಗಳಲ್ಲಿ GMAT ಹಾಗೂ SAT ಪ್ರಶ್ನೆಪತ್ರಿಕೆಗಳು ಒಳಗೊಂಡಿರುತ್ತದೆ. DSERT ಯಿಂದ ಸದರಿ ಪರೀಕ್ಷೆಗಳನ್ನು ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದ ಎದುರಿಸಲು ಅನುಕೂಲವಾಗುವಂತೆ 2019-20 ನೇ ಸಾಲಿನಲ್ಲಿ ಸ್ಪರ್ಧಾಕಲಿ ಎಂಬ ಪರೀಕ್ಷಾ ಕೈಪಿಡಿಯನ್ನು ಸಿದ್ದಪಡಿಸಿ ವಿದ್ಯಾರ್ಥಿಗಳಿಗೆ ವಿತರಿಸಲಾಗಿದೆ. 2020-21ನೇ ಸಾಲಿನಲ್ಲಿ GMAT ಹಾಗೂ SAT ವಿಷಯಗಳಿಗೆ ಸಂಬಂಧಿಸಿದಂತೆ ವಿಡಿಯೋ ತರಗತಿಗಳನ್ನು ಸಿದ್ದಪಡಿಸಿ, ಚಂದನ ವಾಹಿನಿಯಲ್ಲಿ ಪ್ರಸಾರ ಮಾಡಲಾಗಿದೆ.

ಉಲ್ಲೇಖ(1) ಹಾಗೂ (2)ರಲ್ಲಿ ತಿಳಿಸಿರುವಂತೆ ಸದರಿ ಸಾಲಿಗೆ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಶಾಲಾ ಹಂತದಲ್ಲಿ ವಿಶೇಷ ಗುಂಪು ರಚನೆ ಮಾಡಿ, ಸ್ಪರ್ಧಾಕಲಿ ಪರೀಕ್ಷಾ ಕೈಪಿಡಿಯನ್ನು ಬಳಸಿ NTSE ಪರೀಕ್ಷಾ ಸಿದ್ದತೆಗಾಗಿ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ತಿಳಿಸಲಾಗಿದೆ.

ಮುಂದುವರೆದು, ಸದರಿ ಸಾಲಿನಲ್ಲಿ ವಿದ್ಯಾರ್ಥಿಗಳ ಪರೀಕ್ಷಾ ಸಿದ್ದತೆಗೆ ಅನುಕೂಲವಾಗುವಂತೆ GMAT ಪತ್ರಿಕೆಗೆ ಸಂಬಂಧಿಸಿದಂತೆ 30 ನಿಮಿಷಗಳ 16 ವಿಡಿಯೋಗಳು ಈ ಕೆಳಗಿನ ಪರಿಕಲ್ಪನೆಗಳ ಬಗ್ಗೆ ಸಿದ್ದಪಡಿಸಿದೆ.

| ವಿಡಿಯೋ ಸಂಖ್ಯೆ | ಚರ್ಚಿಸಿದ ಪರಿಕಲ್ಪನೆಗಳು | ವಿಡಿಯೋ ಸಂಖ್ಯೆ | ಚರ್ಚಿಸಿದ ಪರಿಕಲ್ಪನೆಗಳು |
|---|---|---|---|
| 01. | Alphabet Pattern (ಅಕ್ಷರ ವಿನ್ಯಾಸ) | 02. | Alphabet Pattern (ಅಕ್ಷರ ವಿನ್ಯಾಸ) |
| 03. | Geometric figures (ಜ್ಯಾಮಿತಿ ಆಕೃತಿಗಳು | 04. | Clock,dice and cube (ಗಡಿಯಾರ,ದಾಳ & ಘನಗಳು) |
| 05. | Number series(ಸಂಖ್ಯಾ ಶ್ರೇಣಿ) | 06. | Matrix (ಮಾತೃಕೆ) ಮತ್ತು BODMAS Rule(ಬೋಡಮಾಸ್ ನಿಯಮ) |
| 07. | Different and similar Numbers (ಭಿನ್ನವಾಗಿರುವ ಮತ್ತು ಸಾಮ್ಯತೆ ಸಂಖ್ಯೆಗಳು) | 08. | Ranking and Puzzle test(ರ್ಯಾಂಕಿಂಗ್ ಮತ್ತು ಪಜ಼ಲ್ ಟೆಸ್ಟ್) |
| 09. | Mirror images and Calender(ಕನ್ನಡಿಯ ಪ್ರತಿಬಿಂಬ ಮತ್ತು ಕ್ಯಾಲೆಂಡರ್) | 10. | Directions and intersecting figures (ದಿಕ್ಕುಗಳು ಹಾಗೂ ಛೇದಿಸುವ ಆಕೃತಿಗಳು) |

| | | | |
|---|---|---|---|
| 11. | Paper folding & Blood relation (ಕಾಗದ ಮಡಿಚುವಿಕೆ ಹಾಗೂ ರಕ್ತ ಸಂಬಂಧ) | 12. | Statement Problem (ಹೇಳಿಕೆ ಸಮಸ್ಯೆಗಳು) |
| 13. | VenDiagram & Odd one out(ವೆನ್ ಚಿತ್ರಗಳು ಮತ್ತು ಗುಂಪಿಗೆ ಸೇರದ ಚಿತ್ರ) | 14. | Symbols & similar figgres (ಚಿಹ್ನೆಗಳು ಮತ್ತು ಸಾಮ್ಯತೆ ಚಿತ್ರಗಳು) |
| 15. | Pyramid, Detecting the left number & series image (ಗೋಪುರಾಕೃತಿ,ಆಕೃತಿಯಲ್ಲಿ ಬಿಟ್ಟಿರುವ ಸಂಖ್ಯೆಗಳನ್ನು ಪತ್ತೆ ಹಚ್ಚುವುದು ಮತ್ತು ಸರಣಿ ಚಿತ್ರಗಳು) ) | 16. | Matrix code and hidden picture(ಮಾತೃಕೆ ಕೋಡ್/ಮಾತೃಕೆ ಸಂಕೇತ, ಅಡಗಿರುವ ಚಿತ್ರ |

ಸದರಿ ವಿಷಯಗಳನ್ನು DSERT ಜ್ಞಾನದೀಪ Youtube ಚಾನಲ್‌ನಲ್ಲಿ upload ಮಾಡಲಾಗಿದೆ. ಶಿಕ್ಷಕರು ವಿಡಿಯೋಗಳನ್ನು ಬಳಸಿ ಮಕ್ಕಳಿಗೆ NTSE ಪರೀಕ್ಷೆಯನ್ನು ಇನ್ನೂ ಉತ್ತಮ ಸಿದ್ದತೆಯೊಂದಿಗೆ ಎದುರಿಸಲು ಸಜ್ಜುಗೊಳಿಸಲು ಸೂಚಿಸಿದೆ.

SAT ಪತ್ರಿಕೆಗಳ ವಿಡಿಯೋಗಳ ತಯಾರಿಕೆ ಕಾರ್ಯವು ಪ್ರಗತಿಯಲ್ಲಿದ್ದು ಶೀಘ್ರದಲ್ಲಿ ವಿಜ್ಞಾನ,ಸಮಾಜ ವಿಜ್ಞಾನ ಹಾಗೂ ಗಣಿತ ವಿಷಯಗಳ ವಿಡಿಯೋಗಳನ್ನು ಜ್ಞಾನದೀಪದಲ್ಲಿ upload ಮಾಡಲಾಗುವುದು.

ಪ್ರಾಂಶುಪಾಲರು ತಮ್ಮ ವ್ಯಾಪ್ತಿಯ ಕ್ಷೇತ್ರಶಿಕ್ಷಣಾಧಿಕಾಗಿರಗಳ/ಕ್ಷೇತ್ರ ಸಮನ್ವಯಾಧಿಕಾರಿಗಳ ಸಭೆ ಕರೆದು ಅವರ ಮೂಲಕ ಎಲ್ಲ ಸರ್ಕಾರಿ/ಅನುದಾನಿತ ಪ್ರೌಢಶಾಲೆಗಳ ಮಕ್ಕಳಿಗೆ ಸದರಿ ವಿಡಿಯೋಗಳನ್ನು ಉಪಯೋಸಿ NTSE ಪರೀಕ್ಷಾ ಸಿದ್ದತೆಗೆ ಸೂಕ್ತ ಕ್ರಮ ವಹಿಸಲು ಸೂಚಿಸಿದೆ.

(ಮಾರುತಿ.ಎಂ.ಆರ್)
ನಿರ್ದೇಶಕರು,ಡಿ.ಎಸ್.ಇ.ಆರ್.ಟಿ.
ಬೆಂಗಳೂರು.

ಗೆ,
ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರುಗಳಿಗೆ ಸೂಕ್ತ ಕ್ರಮಕ್ಕಾಗಿ.